ಹಂಗಿರಲಿಲ್ಲ. ಯಾವುದಾದರೂ ಸಂಬಂಧ ಕುದುರುತ್ತಿದೆ ಎನ್ನುವಾಗಲೇ ಕಮರಿಹೋಗುತ್ತಿತ್ತು. ತೀರ ವಯಸ್ಸಾದವರ ಸಂಗಾತಿಯಾಗುವುದು ವೇಶ್ಯೆಯ ಕೆಲಸ ಮಾಡಿದಂತೆ ಅವನಿಗೆ ಅನ್ನಿಸುತ್ತಿತ್ತು. ಹಾಗಾಗಿ ಅವನು ಒಂದು ಒಳ್ಳೆಯ ಜೊತೆಗಾಗಿ ಹಂಬಲಿಸುತ್ತಿದ್ದ, ಪ್ರೀತಿಗಾಗಿ ಹಾತೊರೆಯುತ್ತಿದ್ದ.

ಅವನ ದುಡಿಮೆಗೆ ಅವನೊಬ್ಬನೇ ವಾರಸುದಾರ. ಹಾಗಾಗಿ ಹೆಚ್ಚು ದುಡಿಯಲು ಅವನಿಗೇನೂ ಆಸಕ್ತಿಯಿರಲಿಲ್ಲ. ಒಪ್ಪುವ ಸಾಂಗತ್ಯ ಸಿಗುವುದು ಸುಲಭವಾಗಿರಲಿಲ್ಲ. ವೃದ್ಧಾಪ್ಯ ಹೇಗೆ ಎನ್ನುವ ಬಗ್ಗೆ ಸ್ಪಷ್ಟತೆಯಿರಲಿಲ್ಲ. ಸಮಯ ಕಳೆಯಲು ಕೆಲಸದಲ್ಲಿ ತೊಡಗಿಕೊಳ್ಳುವುದೇ ಅವನ (ಮತ್ತು ನನ್ನ?) ಏಕ ಮಾತ್ರ ದಾರಿಯಾಗಿತ್ತು.

"ಅದಕ್ಕೇ ಪ್ರೀತಿ, ಬದುಕನ್ನು ಬೊಗಸೆ ತುಂಬಾ ಎತ್ತಿ ಎತ್ತಿ ಕುಡಿವ ಪ್ರಯತ್ನ ಮುಂದುವರೆಸುತ್ತೇನೆ; ನಡುವೆ ಎಷ್ಟಾದರೂ ಸೋರಿ ಹೋಗಲಿ ಬಿಡು, ಫ... ಹೂ ಕೇರ್ಸ್? ಲೈಫ್ ಈಸ್ ಎ ಬಿಚ್" ಎಂದು ಸಮಜಾಯಿಷಿ ಇತ್ತಿದ್ದ.

"ಯು ಆರ್... ರೈಟ್" ಎನ್ನುತ್ತ ಅವನ ಬೆನ್ನು ತಟ್ಟಿದ್ದೆ.

ಆದರೆ, ಗಂಡನನ್ನು ಡೈವೋರ್ಸ್ ಮಾಡಿ ಹೊಸ ಬದುಕನ್ನು ಕಟ್ಟಿಕೊಳ್ಳುವಷ್ಟು ಆಸಕ್ತಿ, ಉತ್ಸಾಹ ನನ್ನ ಬದುಕಿನಲ್ಲಿ ಇರಲಿಲ್ಲ. ದೀರ್ಘ ಒಂಟಿತನ ಎಲ್ಲವನ್ನೂ ಸುಟ್ಟುಹಾಕಿತ್ತು. ಯಾವುದಾದರೂ ಒಂದು ಮ್ಯಾಜಿಕಲ್ ಯೂನಿಕಾರ್ನ್ ನನ್ನ ಬದುಕಿನಲ್ಲೂ ಬಂದು, ಒಂದಷ್ಟು ಬದುಕುವ ಪ್ರೇರಣೆ ನೀಡಬಾರದೇ ಎಂದು ಆ ಕ್ಷಣ ಅನ್ನಿಸಿತು.

ಮಕ್ಕಳನ್ನು ಹುಟ್ಟಿಸಲಾಗದ ನನ್ನ ಗಂಡನ ಜೊತೆಗೆ ನನ್ನದು ಇಪ್ಪತ್ತು ವರ್ಷಗಳ ಬಂಧನವಾಗಿತ್ತು, ಸಂಬಂಧ ಮುರಿದಿತ್ತು; ಮುಪ್ಪಿಗೆ ಮಕ್ಕಳು ಅಂತ ಯಾರನ್ನಾದರೂ ದತ್ತಕ ತಗೊಳ್ಳಲೂ ಅವನು ಬಿಟ್ಟಿರಲಿಲ್ಲ.

ಗಂಡಹೆಂಡತಿಯರಿಬ್ಬರ ಸಮ್ಮತಿಯಿಲ್ಲದೆ ಅದು ಈ ದೇಶದಲ್ಲಿ ಸಾಧ್ಯವೂ ಇರಲಿಲ್ಲ. ಇನ್ನು ಒಂಟಿ ಪೋಷಕಳಾದರೆ ದತ್ತಕ ಸಿಗುವುದು ಇನ್ನೂ ಕಷ್ಟವಿತ್ತು. ಒಂದೇ ಮನೆಯಲ್ಲಿ ಬೇರೆ ಬೇರೆಯಾಗಿ ಬದುಕುತ್ತಿದ್ದೆವು. ಮದುವೆಯಾದಾಗಿನಿಂದಲೂ ಬದುಕಲ್ಲಿ ಅವನಿಗೆ ಆಸಕ್ತಿಯಿರಲಿಲ್ಲ. ವೃತ್ತಿಯಲ್ಲೂ ಅಷ್ಟೆ. ಸುಮ್ಮನೆ ಒಂದೆಡೆ ಕೂರುವಂತ ಮೂದೇವಿ ಮನಸ್ಸು. ಅವನೊಡನೆ ನನಗೆ ಬದುಕೇ ಇಲ್ಲವಾಗಿತ್ತು. ವರ್ಷಗಟ್ಟಲೆ ಕಾಡಿದ್ದ ಒಂಟಿತನ ಮತ್ತು ವಿಹ್ವಲತೆಯನ್ನು ನಾನು ನಿಧಾನವಾಗಿ ಒಂದೊಂದಾಗಿ ಕಡ್ಡಿಗೀರಿ ಸುಟ್ಟುಹಾಕಿದ್ದೆ. ಮನಸ್ಸನ್ನು ಆದಷ್ಟು ಬರಡುಮಾಡಿಕೊಂಡಿದ್ದೆ. ಆದರೆ ವೃದ್ಧಾಪ್ಯ ಹತ್ತಿರದ ತಿರುವಲ್ಲೇ ಕಾಯುತ್ತಿತ್ತು.

ಮಿ.ಕೆ. ಮತ್ತು ನನ್ನ ಸಮಸ್ಯೆಗಳು ಕೊನೆಯಲ್ಲಿ ಒಂದೇ ಆಗಿದ್ದವು.

ಪ್ರಯತ್ನ ಮುಂದುವರೆಸಿದ್ದ ಮಿ.ಕೆ.ಗೆ ಇನ್ನೊಬ್ಬ ಸಂಗಾತಿ ದೊರೆತು ಸುಖವಾಗಿರುವ ಸಾಧ್ಯತೆಗಳಾದರೂ ಇದ್ದವು... ನನಗೆ?

ಕಷ್ಟ ಯಾವುದಾದರೇನು, ಯಾರದ್ದಾದರೇನು? ಅವುಗಳ ಬಣ್ಣ ಒಂದೇ ಅಲ್ಲವೆ?

★★★

ಇದೆಲ್ಲ ನಡೆದು ತಿಂಗಳುಗಳೇ ಆದವು. ಮಿ.ಕೆ. ಮುಂದಿನ ಮೂರು ತಿಂಗಳು ಮಧುಚಂದ್ರದಲ್ಲಿದ್ದ. ನಂತರ ಅವನ ಎದೆ ಒಡೆದಿತ್ತು. ಅವನ ಬದುಕು ಮಗ್ಗುಲಾಗಿತ್ತು. ಅವನು ಬ್ಯಾಗ್‌ಗಳನ್ನು ಪ್ಯಾಕ್ ಮಾಡಿಕೊಂಡು ದಕ್ಷಿಣ ಅಮೆರಿಕ ಪ್ರವಾಸಕ್ಕೆ ಹೋಗಿಬಿಟ್ಟಿದ್ದ.

★★★

ಅವತ್ತು ಭಾನುವಾರದ ಮಧ್ಯಾಹ್ನ. ಸೂಪರ್ ಮಾರ್ಕೆಟ್ಟಿನಲ್ಲಿ ಖರೀದಿ ಮಾಡುತ್ತಿದ್ದೆ. ಹಣ್ಣುಗಳ ವಿಚಾರ ಬಂದಾಗ ನನಗೆ ವಿಶ್ವದ ಎಲ್ಲ ಹಣ್ಣುಗಳ ಬಗ್ಗೆ ಪ್ರೀತಿ. ಜೊತೆಗೆ ಇಂಗ್ಲೆಂಡಿನ ಸೂಪರ್